OS 233/2022
ಡಿಡಬ್ಲೂ-1

ದಿಃ 28-03-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.
**ಮುಂದುವರೆದ ಪಾಟೀ ಸವಾಲು ಶ್ರೀ. ಎಸ ಆರ ಎನ ವಕೀಲರಿಂದಃ**

ನಾನು ಬಿ.ಎ. ಓದಿರುತ್ತೇನೆ. ನನ್ನ ಮುಖ್ಯ ವಿಚಾರಣೆಗೆ ನಾನೇ ಮಾಹಿತಿ ನೀಡಿರುತ್ತೇನೆ. ದಾವಾ ಆಸ್ತಿಗಳು ಹಿರಿಯರ ಜಮೀನುಗಳು ಎಂದರೆ ಸರಿ. ವಾದಿ ನಂಬರ 1 ನನ್ನ ತಮ್ಮನ ಮಗ ಮತ್ತು ವಾದಿ ನಂಬರ 2 ನನ್ನ ತಮ್ಮನ ಹೆಂಡತಿ. ಪ್ರತಿವಾದಿ ನಂಬರ 1 ಮತ್ತು 2 ನನ್ನ ಜೊತೇ ನ್ಯಾಯಾಲಯಕ್ಕೆ ನನ್ನ ಜೊತೆ ಬಂದಿಲ್ಲ. 1ನೇ ಎದುರದಾರರು ಸಾಕ್ಷಿ ಹೇಳಲು ತೊಂದರೆ ಇತ್ತಾ ಎಂದರೆ ಇಲ್ಲ ಎಂದು ಹೇಳುತ್ತಾರೆ. ದಾವಾ ಸಂಖ್ಯೆ 222/2013 ರ ಬಗ್ಗೆ ಮೊಹಿತಿ ಇರುತ್ತದೆ. 1ನೇ ಪ್ರತಿವಾದಿಗೆ 8 ಎಕರೆ ಪಾಲಿನಲ್ಲಿ ಬಂದಿರುತ್ತದೆ. ನನಗೆ ಬಂದ ಆಸ್ತಿಯನ್ನು 2 ಎಕರೆ 2 ಗುಂಟೆ ಆಸ್ತಿಯನ್ನು ಹಿರೇಮಠ ಎಂಬುವವರಿಗೆ ಮಾರಾಟ ಮಾಡಿರುತ್ತೇನೆ. 2ನೇ ಪ್ರತಿವಾದಿಯ ಪಾಲಿಗೇ 3 ವರೆ ಎಕರೆ ಜಮೀನು ಬಂದಿರುತ್ತದೆ. ನನ್ನ ತಂದೆ ನನ್ನ ಗಂಡನಿಗೆ ಆಸ್ತಿ ಮಾರಾಟ ಮಾಡಿರುತ್ತಾರೆ. ನನ್ನ ತಂದೆ ನನ್ನ ಗಂಡನಿಗೆ ಏಕೆ ಆಸ್ತಿ ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿಯೂ ನನ್ನ ತಂದೆ ಅವರ ಇಚ್ಚೆಯಂತೆ ಖರೀದಿ ನೀಡಿರುತ್ತಾರೆ ಎಂದು ಹೇಳುತ್ತಾರೆ. 1 ನೇ ಪ್ರತಿವಾದಿ ನನಗಿಂತ ಚಿಕ್ಕವರು. ಆತನಿಗೆ ಕೆಲವೊಂದು ಸಲ ತಲೆ ಸರಿ ಇರುವುದಿಲ್ಲ ಎಂದರೆ ಸರಿಯಲ್ಲ.

ಆತನಿಗೆ ತಲೆ ಸರಿ ಇಲ್ಲದಾಗ ನಾವು ದಾವೆ ಸಂಖ್ಯೆ 222/2013 ರನ್ನು ಸಲ್ಲಿಸಿ ಅದನ್ನು ಏಕಾಏಕಿ ರಾಜಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಸಾಕ್ಷಿಯೂ ಹಿರಿಯರು ಎಲ್ಲರೂ ಸೇರಿ ರಾಜೀ ಮಾಡಿಸಿದ್ದಾರೆ ಎಂದು ಹೇಳುತ್ತಾರೆ. ಸದರಿ ರಾಜಿಯನ್ನು ವಾದಿಗಳಿಗೆ ತಿಳಿಯದ ಹಾಗೇ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಹಿರಿಯರು ಸೇರಿ ಮಾಡಿದ್ದಾರೆ ಎಂದು ಹೇಳುತ್ತಾರೆ. ನನ್ನನ್ನು ಗದಗ ಹತ್ತಿರ ಮಲ್ಲಸಮುದ್ರ ಗದಗ ಜಿಲ್ಲೆಯಲ್ಲಿ ಮದುವೆ ಮಾಡಿ ಕೊಟ್ಟಿದ್ದಾರೆ. ನನ್ನ ತಂದೆ ನನ್ನ ಗಂಡನಿಗೆ ಆಸ್ತಿ ಮಾರಿದಾಗ ನನ್ನ ಸಹೋದರ ಮತ್ತು ನನ್ನ ತಂದೆ ಗದಗದಲ್ಲಿ ನನ್ನ ಜೊತೆ ವಾಸವಾಗಿದ್ದಾರೆ ಎಂದರೆ ಸರಿಯಲ್ಲ. ಗದಗದಲ್ಲಿ ಬೇರೆ ಮನೆ ಮಾಡಿಕೊಂಡು ಇದ್ದಾರೆ ಎಂದು ಹೇಳುತ್ತಾರೆ. ನನ್ನ ತಮ್ಮ ಮತ್ತು ಆತನ ಹೆಂಡತಿ ಮಕ್ಕಳಿಗೆ ಹೊಂದಾಣಿಕೆ ಇಲ್ಲ ಎಂದರೆ ಇರಬಹುದು. ನನ್ನ ತಂದೆ ನನ್ನ ಗಂಡನಿಗೆ ಖರೀದಿ ಕೊಟ್ಟ ನಂತರ ಈ ವಿವಾದ ಬಂದಿದೆ ಎಂದರೆ ಸರಿಯಲ್ಲ. ಕರಗಾಂವನ ಮನೆ ಸರ್ವೆ 62 ರಲ್ಲಿ ಇದೆ ಎಂದರೆ ಸರಿ. ಸದರಿ ಮನೆಯಲ್ಲಿ ವಾದಿಗಳು ಇರುತ್ತಾರೆ ಎಂದರೆ ಸರಿ.

ಅಣಗೌಡನಿಗೆ ಒಟ್ಟು 4 ಜನ ಮಕ್ಕಳು. ಅವರುಗಳೆಂದರೆ ಶಿವಗೌಡ, ವಿಮಲಾಬಾಯಿ, ಬಾಬುಗೌಡ ಮತ್ತು ಚಂಪಾಬಾಯಿ ಎಂದು ಹೇಳುತ್ತಾರೆ. ಅಣಗೌಡ ನ ಮಕ್ಕಳಲ್ಲಿ ಹಿರಿಯರ ಆಸ್ತಿಯಲ್ಲಿ ಪಾಲು ಆಗಿದೆ ಎಂದರೆ ಆಗಿರಬಹುದು ಎಂದು ಹೇಳುತ್ತಾರೆ. ಯಾವಾಗ ಪಾಲು ಆಗಿದೆ ಎಂದುಹೇಳಲು ಬರುವುದಿಲ್ಲ.

ನನ್ನ ತಂದೆಗೆ ಒಟ್ಟು ಎಷ್ಟು ಆಸ್ತಿ ಪಾಲಿನಲ್ಲಿ ಬಂದಿದೆ ಎಂದು ಹೇಳಲು ಆಗುವುದಿಲ್ಲ. ನನ್ನ ತಮ್ಮನಿಗೆ ಮಾನಸಿಕ ಸ್ಥಿತಿ ಸರಿ ಇಲ್ಲದಾಗ ದಾವೆ ಸಲ್ಲಿಸಿ ಅದನ್ನು ವಾದಿಗಳಿಗೆ ಗೊತ್ತಾಗದ ಹಾಗೇ ರಾಜೀ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. 2 ನೇ ವಾದಿ ನನ್ನ ತಮ್ಮನ ಮೇಲೆ ಕ್ರಿಮಿನಲ್ ಕೇಸ ಹಾಕಿದ್ದಾಳೆ ಎಂದರೆ ಗೊತ್ತಿಲ್ಲ. ನನ್ನ ಗಂಡ 2-3 ವರ್ಷದ ಹಿಂದೆ ನನ್ನ ತಂದೆಯಿಂದ ಕ್ರಯಕ್ಕೆ ಪಡೆದಿರುತ್ತಾರೆ. 2ನೇ ವಾದಿ ನನ್ನ ತಮ್ಮನ ಮೇಲೆ ಪೋಟಗಿ ಕೇಸ ಹಾಕಿದ್ದಾಳೆ ಎಂದರೆ ಸರಿ. ಪ್ರತಿವಾದಿ ನಂಬರ 1 ಮತ್ತು 2 ನ್ಯಾಯಾಲಯಕ್ಕೆ ಬಂದಾಗ ಊರಿಗೆ ಹೋಗದೇ ಲಾಡ್ಜಿಂಗ ನಲ್ಲಿ ಇರುತ್ತಾರೆ ಎಂದರೆ ಸಾಕ್ಷಿಯು ಸುಮ್ಮನೆ ಇರುತ್ತಾರೆ.

OS 233/2022
ಡಿಡಬ್ಲೂ-1

2014 ರಿಂದ 2020 ಇಲ್ಲಿಯವೆಗೂ ನಾವು ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಯಾವುದೇ ವ್ಯವಹಾರ ಮಾಡಿಲ್ಲ ಎಂದರೆ ಸರಿಯಲ್ಲ. ವಾದಿಗಳಿಗೆ ಗೊತ್ತಾಗದ ಹಾಗೇ ನಾವು ಡಿಕ್ರಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೇಳಿರುತ್ತಾರೆ ಮುಂದುವರೆದ ಪಾಟೀ ಸವಾಲು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ.ಹೇ. ಕೇ. ಸ. ಇದೆ.

ಪ್ರ.ಹಿ.ದಿ.ನ್ಯಾಯಾಧೀಶರು, ಚಿಕ್ಕೋಡಿ